



## ಬೃಹತ್ ಬೀಸೋಕಲ್ಲು

ರೋಣ ತಾಲ್ಲೂಕಿನ ಸವಡಿ ಗ್ರಾಮಕ್ಕೆ ಮದುವೆಗೆಂದು ಹೋಗಿದ್ದೆ. ಓಣಿಯಲ್ಲಿ ನಡೆದುಕೊಂಡು ಹೋಗುವಾಗ ರಸ್ತೆ ಬದಿ ಅನಾಥವಾಗಿ ಬಿದ್ದಿದ್ದ ಬೃಹತ್ ಬೀಸೋಕಲ್ಲಿನ ಮೇಲೆ ನನ್ನ ದೃಷ್ಟಿ ಹರಿಯಿತು. ಈ ಕಲ್ಲುಗಳು ಬಹುಶಃ ಕೃಷಿ ಚಟುವಟಿಕೆ ಆರಂಭವಾದ ದಿನಗಳಿಂದಲೆ, ಮಾನವ ಬಳಸುತ್ತಿರುವ ಅಗತ್ಯ ವಸ್ತಗಳಲ್ಲಿ ಒಂದಾಗಿತ್ತು. 20ನೇ ಶತಮಾನದ 90ರ ದಶಕದವರೆಗೂ ಹಳ್ಳಿಗರ ಜೀವನದ ಅವಿಭಾಜ್ಯ ಅಂಗವಾಗಿದ್ದ, ಬೀಸೋಕಲ್ಲು ಹಳ್ಳಿಗಳಿಂದಲೇ ಮಾಯವಾಗಿದೆ. ಮದುವೆ, ಮುಂಜವಿಗಳಲ್ಲಿ ಪೂಜೆಗಾಗಿ ಇಂದು ಬಾಡಿಗೆ ಬೀಸೋಕಲ್ಲು ಶಾಸ್ತ್ರಕ್ಕೆ ಸೀಮಿತವಾಗಿ ಬಳಕೆಯಲ್ಲಿವೆ.

ನಾನು ಹುಟ್ಟಿ ಬೆಳೆದ ಗದಗದ ಮುಂಡರಗಿ ತಾಲ್ಲೂಕಿನ ಹಮ್ಮಿಗಿ ಗ್ರಾಮದಲ್ಲಿ ಒಂದು ಬೀಸೋಕಲ್ಲು ಇತ್ತು. 90ರ ದಶಕದ ಸುಮಾರಿಗೆ, ಬೇಸಿಗೆ ಬಂತೆಂದರೆ ಸಾಕು ಹಿಂದಿನ ರಾತ್ರಿಯೆ ಬಂದು ಆ ಕಲ್ಲಿಗೆ ಪಾಳಿ ಹಚ್ಚಿ ಹೋಗುತ್ತಿದ್ದರು. ಶ್ಯಾವಿಗೆ ಹಿಟ್ಟು ಬೀಸಲು ಗೋಧಿಯನ್ನು ಕೈ ತ್ಯಾವ ಮಾಡಿ, ಆರಿಸಿಕೊಂಡು ಬಂದಿರುತ್ತಿದ್ದರು. ಬೆಳಿಗ್ಗೆ 8 ಗಂಟೆಗೆ ಆರಂಭವಾಗುತ್ತಿದ್ದ ಬೀಸುವ ಕಾರ್ಯ ಸಂಜೆಯಾಗುವವರೆಗೂ ನಡೆಯುತ್ತಿತ್ತು. ಇಡೀದಿನ ಬೀಸೋಕಲ್ಲಿನ ಪದಗಳ ಜಾನಪದ ಜಾತ್ರೆಯೆ ಸೇರಿದ ಅನುಭವವಾಗುತ್ತಿತ್ತು. ನಮ್ಮ ಮನೆಯಲ್ಲಿದ್ದ ಬೀಸೋಕಲ್ಲಿನ ವ್ಯಾಸ ಕೇವಲ 40 ರಿಂದ 50 ಸೆಂ.ಮೀ. ಇತ್ತು. ಇದೇ ಈ ಕಲ್ಲನ್ನು ಸುತ್ತ ಮೂರು ಜನ ಕುಳಿತು ಬೀಸುತ್ತಿದ್ದರು. ನಾನು ಸವಡಿ ಗ್ರಾಮದಲ್ಲಿ ನೋಡಿದ ಬೀಸೋಕಲ್ಲು 80 ಸೇಂ.ಮೀ. ವ್ಯಾಸವನ್ನು ಹೊಂದಿದ್ದು, ಇದನ್ನು ಎಷ್ಟು ಜನ ಬೀಸುತ್ತಿದ್ದರು ಎನ್ನೋದೇ ಆಶ್ಚರ್ಯವಾಗಿತ್ತು.

–ರವಿ ಸೋ. ದೇವರಡ್ಡಿ, ಮುಂಡರಗಿ

## ಕಾಡುಗಳ ಆಕರ್ಷಣೆ ಬ್ರಾಕೆಟ್ ಫಂಗಸ್

ಚಿತ್ರದಲ್ಲಿ ಮರದ ಕಾಂಡಕ್ಕೆ ಎರಡೂ ಕಡೆ ಅಂಟಿಕೊಂಡು ತಟ್ಟೆಗಳಂತೆ ಹೊರಚಾಚಿಕೊಂಡರುವ ಆಕೃತಿಗಳನ್ನು 'ಬ್ರಾಕೆಟ್ ಫಂಗಸ್' ಅಥವಾ 'ಶೆಲ್ಫ್ ಫಂಗಸ್' ಎನ್ನುತ್ತಾರೆ. ಸಾಮಾನ್ಯವಾಗಿ ಇವು ಕಾಡುಗಳಲ್ಲಿ ಅಥವಾ ದಟ್ಟ ಪ್ರಕೃತಿಯಿರುವ ಉದ್ಯಾನವನಗಳಲ್ಲಿ ಕಾಣಸಿಗುತ್ತವೆ. ನನಗೆ ಇವು ಕಂಡುಬಂದದ್ದು ನಮ್ಮ ಸರ್ಕಾರದ ಪ್ರವಾಸೋದ್ಯಮ ಇಲಾಖೆಯ ಭಾಗವೇ ಆಗಿರುವ ರಿವರ್ ಟರ್ನ್ ಲಾಡ್ಜ್‌ನಲ್ಲಿ. ಇವನ್ನು ವೈಜ್ಞಾನಿಕವಾಗಿ ಪಾಲಿಪೋರ್‌ಗಳೆಂದು ಕರೆಯುತ್ತಾರೆ. ಇವು ಬೆಸಿಡಿಯೋಮೈಸೀಟ್‌ಗಳೆಂಬ ಶಿಲೀಂಧ್ರ ಅಥವಾ ಅಣಬೆ ಜಾತಿಯ ಜೀವಿಗಳು. ಇವು ಕಾಂಕ್‌ಗಳೆಂಬ ದೊಡ್ಡ ಫಲವತ್ತಾದ ಆಕೃತಿಗಳನ್ನು ರೂಪಿಸುತ್ತವೆ ಹಾಗೂ ಅವುಗಳ ತಳಭಾಗದಲ್ಲಿ ರಂಧ್ರಗಳು ಅಥವಾ ಕೊಳವೆಗಳಿರುತ್ತವೆ.

ಕೆಲವು ಬ್ರಾಕೆಟ್ ಫಂಗಸ್‌ಗಳು ವರ್ಷಕ್ಕೊಮ್ಮೆ ಹಾಗೂ ಕೆಲವು ವರ್ಷಪೂರ್ತಿ ಈ ಆಕೃತಿಗಳನ್ನು ರೂಪಿಸುತ್ತವೆ. ಈ ಆಕೃತಿಗಳು ಮರದಂತೆ ಗಟ್ಟಿಯಾಗಿ, ಬ್ರಾಕೆಟ್ ಅಥವಾ ಆವರಣದಂತೆ, ಇಲ್ಲವೇ ಶೆಲ್ಫ್ ಅಥವಾ ತಟ್ಟೆಯಂತೆ ಇಲ್ಲವೇ ದುಂಡಾದ ಆಕಾರ ಹೊಂದಿರುತ್ತವೆ. ಹಾಗಾಗಿಯೇ ಇವುಗಳಿಗೆ ಬ್ರಾಕೆಟ್ ಅಥವಾ ಶೆಲ್ಫ್ ಫಂಗಸ್ ಎಂಬ ಹೆಸರುಗಳು ಬಂದಿವೆ. ತಳಭಾಗದಲ್ಲಿರುವ ರಂಧ್ರಗಳಲ್ಲಿ ಬೆಸಿಡಿಯೋಸ್ಪೋರ್‌ಗಳೆಂಬ ಬೀಜಗಳು ಉತ್ಪತ್ತಿಯಾಗುತ್ತವೆ. ಇವು ತೇವಾಂಶ ಹೆಚ್ಚಾಗಿರುವಾಗ ಬಿಡುಗಡೆಗೊಂಡು ಸೂಕ್ತ ಸ್ಥಳಗಳಲ್ಲಿ ಬಿದ್ದಾಗ ಹೊಸ ಫಂಗಸ್‌ಗಳಾಗಿ ಮೊಳೆಯುತ್ತವೆ. ಈ ಬ್ರಾಕೆಟ್ ಫಂಗಸ್ ಬದುಕಿರುವ ಹಾಗೂ ಸತ್ತಿರುವ, ಎರಡೂ ಮರಗಳ ಕಾಂಡಗಳ ಮೇಲೆ ಬೆಳೆಯುತ್ತವೆ. ಇವು ಆ ಕಾಂಡಗಳ ಮೂಲಕ ಆ ಮರಗಳ ಪೋಷಕಾಂಶಗಳನ್ನು ತೆಗೆದುಕೊಂಡು ಅವು ಕೊಳೆಯುವಂತೆ ಮಾಡುತ್ತವೆ. ಸತ್ತಿರುವ ಮರಗಳು ಕೊಳೆಯುವುದರಿಂದ ಕೆಲವು ಪೋಷಕಾಂಶಗಳು ಪ್ರಕೃತಿಗೆ ಬಿಡುಗಡೆಯಾಗಿ ಅವುಗಳ ಪುನರಾವರ್ತನೆಯನ್ನು ನೋಡಿಕೊಳ್ಳುತ್ತವೆ.

ಆದರೆ ಬದುಕಿರುವ ಮರಗಳು ಕೊಳೆಯುವುದರಿಂದ ಮರಗಳಿಗೆ ಹಾನಿಯಾಗುತ್ತದೆ. ಕೆಲವು ಬ್ರಾಕೆಟ್ ಫಂಗಸ್‌ಗಳು ಮಣ್ಣಿನಲ್ಲಿ ಬೆಳೆದು, ತಮ್ಮ ಮೈಕೋರೈಜಾ ಎಂಬ ಬೇರುಗಳನ್ನು ಮರಗಳ ಬೇರುಗಳೊಂದಿಗೆ ಬೆಸೆಯುತ್ತವೆ. ಆಗ ಇವು ಮರಗಳಿಗೆ ನೀರು ಮತ್ತು ಖನಿಜಗಳನ್ನು ನೀಡಿ, ಅವುಗಳಿಂದ ಸಿದ್ಧವಾದ ಆಹಾರವನ್ನು ತೆಗೆದುಕೊಳ್ಳುತ್ತವೆ. ಹೀಗೆ ಕೂಡಿ ಬಾಳುತ್ತವೆ. ಇದುವರೆಗೂ ವಿಜ್ಞಾನಿಗಳಿಗೆ ಸುಮಾರು ಒಂದು ಸಾವಿರ ಪ್ರಭೇದಗಳ ಬ್ರಾಕೆಟ್ ಫಂಗಸ್‌ಗಳು ಇರುವುದು ತಿಳಿದುಬಂದಿದೆ. ಆದರೆ ಇನ್ನೂ ಹಲವಾರು ಪ್ರಭೇದಗಳು ಇರಬಹುದೆಂದು ಹೇಳುತ್ತಾರೆ. ಈ ಬ್ರಾಕೆಟ್ ಫಂಗಸ್‌ಗಳನ್ನು ಸಾಂಪ್ರದಾಯಿಕ ಚಿಕಿತ್ಸೆಗಳಲ್ಲಿ ಬಳಸಲಾಗುತ್ತದೆ. ಹಾಗಾಗಿ ಇವುಗಳ ಔಷಧೀಯ ಗುಣಗಳ ಬಗ್ಗೆ ಅಧ್ಯಯನ ನಡೆಯುತ್ತಿದೆ. ಕಾಡುಗಳಿಗೆ ಹೋದಾಗ ಈ ಬ್ರಾಕೆಟ್ ಫಂಗಸ್‌ಗಳನ್ನು ನೋಡುವುದು ವಿಸ್ಮಯ ತರುತ್ತದೆ.

–ಬಿ.ಆರ್. ಸುಹಾಸ್, ಬೆಂಗಳೂರು

